# ಬಿನೋದಿನಿ ದಾಸಿ

ಸ್ವರ್ಣಗೌರಿ

**ಸ್ಪರ್ಶಮಣಿಯು ಸಾಮಾನ್ಯ ಲೋಹವನ್ನು ಚಿನ್ನವಾಗಿ ಪರಿವರ್ತಿಸುವಂತೆ ಶ್ರೀರಾಮಕೃಷ್ಣರ ದಿವ್ಯಸ್ಪರ್ಶ ಎಂಥ ವ್ಯಕ್ತಿಯನ್ನೂ ದೈವೀ ಪುರುಷನನ್ನಾಗಿ ಮಾಡಬಲ್ಲದು. ಇದಕ್ಕೊಂದು ಜ್ವಲಂತ ಉದಾಹರಣೆ ಬಿನೋದಿನಿ ದಾಸಿ. ಆಕೆಯ ಹೃದಯಸ್ಪರ್ಶಿ ಜೀವನಚಿತ್ರವನ್ನು ನೀಡಿರುವ ಸ್ವರ್ಣಗೌರಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.**

'ನಿನ್ನ ಅಭಿನಯವು ಸಾವಿರಾರು ಹೃದಯಗಳಲ್ಲಿ ಆನಂದವನ್ನು ಚಿಮ್ಮಿಸಿದೆ. ನಿನ್ನ ಜೀವನದ ಹೆಗ್ಗಳಿಕೆಗಳು ಅತ್ಯುನ್ನತ. ಚೈತನ್ಯ ಲೀಲೆಯಲ್ಲಿ ಚೈತನ್ಯನ ಪಾತ್ರವು ನೂರಾರು ಜನರ ಹೃದಯವನ್ನೇ ಸೂರೆಗೊಂಡಿದೆ. ಎಲ್ಲ ಅಭಿಮಾನಿಗಳ ಆಶೀರ್ವಾದ ನಿನ್ನ ಮೇಲಿದೆ. ನೀನೊಂದು ಅಸಾಮಾನ್ಯ ವ್ಯಕ್ತಿ.'

ಬಂಗಾಳದ ಸುಪ್ರಸಿದ್ಧ ನಾಟಕಕಾರ ಗಿರೀಶಚಂದ್ರ ಘೋಷನು 'ಸ್ಟಾರ್ ಥಿಯೇಟರ್‌ನ ಚಂದ್ರ', 'ನಾಟಕರಂಗದ ಹೂ', 'ಬಂಗಾಳಿ ನಾಟಕರಂಗದ ಕಣ್ಮಣಿ' ಎಂದೆಲ್ಲಾ ಬಿರುದಾಲಂಕೃತಳಾದ ಅಭಿನೇತ್ರಿ ಬಿನೋದಿನಿ ದಾಸಿಗೆ ಬರೆದ ಪತ್ರದ ಕೆಲವು ಸಾಲುಗಳು ಇವು. ಸುಪ್ರಸಿದ್ಧರಾದ ಎಡ್ವಿನ್ ಆರ್‌ನಾಲ್ಡ್, ಬಂಕಿಮ ಚಂದ್ರ ಚಟರ್ಜಿ, ಫಾದರ್ ಲಫೋಂಟ್ ಮುಂತಾದ ಗಣ್ಯವ್ಯಕ್ತಿಗಳು ಆಕೆಯ ಅಭಿನಯವನ್ನು ಮೆಚ್ಚಿದ್ದರು. ವಿಜಯಕೃಷ್ಣ ಗೋಸ್ವಾಮಿಯಂತೂ ಆನಂದದಿಂದ ನೃತ್ಯವನ್ನೇ ಮಾಡುತ್ತಿದ್ದನು, ಆಕೆಯ ಅಭಿನಯಕ್ಕೆ ಬೆರಗಾಗಿ.

ಈ ಹೊಗಳಿಕೆಯೆಲ್ಲಾ ಹತ್ತೊಂಬತ್ತನೇ ಶತಮಾನದ ಹಿಂದೂ ಸಮಾಜದಲ್ಲಿ ನಿಮ್ನವರ್ಗಕ್ಕೆ ಸೇರಿದ ಒಂದು ಹೆಣ್ಣಿಗೆ. ಆಗಿನ ಕಾಲದಲ್ಲಿ ಒಳ್ಳೆಯ ಮನೆತನದ ಹೆಣ್ಣುಮಕ್ಕಳು ನಾಟಕರಂಗಕ್ಕೆ ಸೇರುತ್ತಿರಲಿಲ್ಲ. ಆದರೆ ಈ ಬಿರುದುಬಾವಲಿಗಳಿಗಿಂತ ಶ್ರೀರಾಮಕೃಷ್ಣರ ಕೃಪೆಯಿಂದ ಆಕೆಯ ಜೀವನದಲ್ಲಿ ಉಂಟಾದ ಅದ್ಭುತ ಪರಿವರ್ತನೆಯು ಅತ್ಯಂತ ಶ್ರೇಷ್ಠ. ಆಕೆಯೇ, 'ಈ ಕಾರಣಕ್ಕೆ ನನ್ನ ಈ ದೇಹವನ್ನು ವರವೆಂದು ಪರಿಗಣಿಸುವೆ. ಪ್ರಪಂಚವೆಲ್ಲಾ ಜರಿದರೂ ಚಿಂತೆಯಿಲ್ಲ. ಶ್ರೀರಾಮಕೃಷ್ಣರ ಕೃಪೆಗೆ ಪಾತ್ರಳಾದೆನಲ್ಲಾ ಎಂಬ ಸಾರ್ಥಕ ಭಾವವೊಂದೇ ಸಾಕು' ಎಂದು ಬರೆಯುತ್ತಾಳೆ.

೧೮೮೪ರ ಆಗಸ್ಟ್ ೩ನೇ ತಾರೀಖು ಮೊದಲ ಬಾರಿ 'ಚೈತನ್ಯಲೀಲೆ'ಯಲ್ಲಿ ಚೈತನ್ಯರ ಪಾತ್ರಾಭಿನಯವನ್ನು ಮಾಡಿದಳು. ಅಭಿನಯಕ್ಕೆ ಮುನ್ನ 'ಅಮೃತ ಬಜಾರ್' ಪತ್ರಿಕೆಯ ಸಂಪಾದಕನಾದ ಶಿಶಿರ್ ಕುಮಾರ್ ಘೋಷನು, 'ನೀನು ಸದಾ ಚೈತನ್ಯರ ಪಾದಪದ್ಮದಲ್ಲೇ ಮನಸ್ಸನ್ನಿಡು. ಆತನು ದೀನೋದ್ಧಾರಕ, ಪತಿತಪಾವನ, ಅಹೇತುಕ ಕೃಪಾಮಯನು' ಎಂದು ಹರಸಿದ್ದನು.

ಆತನ ಮಾತುಗಳನ್ನು ಕೇಳಿ ಬಿನೋದಿನಿಯು ಸದಾ ಶ್ರೀ ಚೈತನ್ಯರ ನಾಮಸ್ಮರಣೆ ಮಾಡುತ್ತಿದ್ದಳು. ಹೇಗೆ ಈ ಕ್ಲಿಷ್ಟಕರವಾದ ಪಾತ್ರವನ್ನು ಅಭಿನಯಿಸುವೆನೋ ಎಂದು ಹೆದರಿ ಸದಾ, 'ಓ! ದೀನೋದ್ಧಾರಕನೆ, ಕೃಪೆ ಮಾಡು' ಎಂದು ಆರ್ತಳಾಗಿ ಪ್ರಾರ್ಥಿಸುತ್ತಿದ್ದಳು. ಅಭಿನಯದ ಹಿಂದಿನ ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಚಡಪಡಿಸಿದಳು. ಮಾರನೇ ದಿನ ಪ್ರಾತಃಕಾಲದಲ್ಲೆದ್ದು ಗಂಗೆಯಲ್ಲಿ ಮಿಂದು ತಾಯಿ ದುರ್ಗೆಯ ಹೆಸರನ್ನು ೧೦೮ ಬಾರಿ ಬರೆದು, 'ಹೇ ಮಹಾಪ್ರಭು, ಚೈತನ್ಯನೇ, ನೀನು ನನ್ನನ್ನು ರಕ್ಷಿಸಲೇಬೇಕು. ನಿನ್ನ ಕೃಪೆಯನ್ನು ನೀಡಲೇಬೇಕು' ಎಂದು ಆರ್ತಳಾಗಿ ಪ್ರಾರ್ಥಿಸತೊಡಗಿದಳು. ಆಕೆಯೇ ತನ್ನ ಜೀವನಚರಿತ್ರೆಯಲ್ಲಿ ಹೀಗೆಂದು ಬರೆಯುತ್ತಾಳೆ : 'ಅಭಿನಯಿಸುತ್ತಿರುವಾಗ ಆತನ ಕೃಪೆಯನ್ನು ಪಡೆದೆ. ಅನಂತ ಚೈತನ್ಯವು ಬೆಳಕಿನ ರೂಪದಲ್ಲಿ ನನ್ನ ಹೃದಯವನ್ನು ಹೊಕ್ಕಿತು. ಹೊರಗಿನ ಪ್ರಪಂಚದ ಪರಿವೆಯನ್ನೇ ಕಳೆದುಕೊಂಡೆ. ಹೃದಯದೊಳಗೆ ಶ್ರೀ ಚೈತನ್ಯರ ಪಾದಪದ್ಮಗಳನ್ನೇ ಕಂಡೆ. ದೇಹವು ಕಂಪಿಸಿತು, ರೋಮಾಂಚನವಾಯಿತು. ಸಂನ್ಯಾಸವನ್ನು ಸ್ವೀಕರಿಸಿ ತಾಯಿ ಶಚಿದೇವಿಯನ್ನು ಬೀಳ್ಕೊಡುವಾಗಿನ ಆ ದೃಶ್ಯ ಎಲ್ಲರ ಹೃದಯವನ್ನು ಕರಗಿ ನೀರಾಗಿಸುತ್ತಿತ್ತು. ಕೆಲವರ ಅಳುವಿನ ಧ್ವನಿ ನನ್ನ ಹೃದಯದಲ್ಲಿ ಮಾರ್ದನಿಸುತ್ತಿತ್ತು. ಸಂನ್ಯಾಸದ ನಂತರ, "ಓ ಹರಿ! ನನ್ನ ಹೃದಯವನ್ನು ಕದ್ದು ಎಲ್ಲಿ ಹೋದೆ? ಈ ಪ್ರಪಂಚದಲ್ಲಿ ನಾನೊಂದು ಅನಾಥೆ. ಕೃಪೆ ಮಾಡು" ಎಂದೆಲ್ಲಾ ಹಾಡುವಾಗ ನನ್ನ ಭಾವನೆಗಳನ್ನು ವರ್ಣಿಸಲಾರೆ. ಆ ಏಕಾಂಗಿತನವನ್ನು ನಿಜವಾಗಿಯೂ ಅನುಭವಿಸಿದೆ. ನನ್ನ ಹೃದಯವು ಆತನ ಪಾದಪದ್ಮಗಳಲ್ಲಿ ಶರಣಾಗಲು ಕಾತರಿಸುತ್ತಿತ್ತು.'

ಗಿರೀಶ್‌ಚಂದ್ರ ಘೋಷನೇ ಆಕೆಯ ನಟನೆಯ ಬಗ್ಗೆ ಹೀಗೆಂದು ಬರೆಯುತ್ತಾನೆ, 'ನಟಿಸುವಾಗ ಬಿನೋದಿನಿಯು ಸಂಪೂರ್ಣವಾಗಿ ತನ್ಮಯಳಾಗಿ ತನ್ನನ್ನೇ ಮರೆತು ಆ ಪಾತ್ರದ ಭಾವದಲ್ಲಿ ಒಂದಾಗಿ ಬಿಡುತ್ತಿದ್ದಳು. ಆಕೆಯ ನಟನೆಯು ನೈಜತೆಯನ್ನೇ ಪ್ರತಿಬಿಂಬಿಸುತ್ತಿತ್ತು.'

೨೧ ಸೆಪ್ಟೆಂಬರ್ ೧೮೮೪ ಬಿನೋದಿನಿ ದಾಸಿಯ ಜೀವನದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ಸುದಿನ. ಅಂದು ಶ್ರೀರಾಮಕೃಷ್ಣರು 'ಚೈತನ್ಯಲೀಲೆ' ನೋಡಲು ಬರುವವರಿದ್ದರು. ಸಂಜೆ ೮.೩೦ರ ಸುಮಾರಿಗೆ ಅವರನ್ನು ಹೊತ್ತ ಗಾಡಿಯು 'ಸ್ಟಾರ್ ಥಿಯೇಟರ್'ನ ಮುಂದೆ ನಿಂತಿತು. ಕಣ್ಣು ಕೋರೈಸುವ ದೀಪಾಲಂಕಾರವು ಅವರ ಭಗವದ್ಭಾವವನ್ನು ಉದ್ದೀಪನ ಗೊಳಿಸಿತು. ಚೈತನ್ಯರ ಜೀವನ ಚರಿತ್ರೆಯ ವಿವಿಧ ದೃಶ್ಯಗಳು ಅವರನ್ನು ಸಮಾಧಿಸ್ಥರನ್ನಾಗಿ ಮಾಡಿದವು.

ಚೈತನ್ಯನು ಶ್ರೀವಾಸನ ಕಾಲುಗಳನ್ನು ಹಿಡಿದು, 'ಅಯ್ಯೋ! ನನಗಿನ್ನೂ ಶ್ರೀಕೃಷ್ಣನಲ್ಲಿ ಭಕ್ತಿ ಉದಯವಾಗಲಿಲ್ಲವಲ್ಲಾ! ಈ ಜೀವನ ವ್ಯರ್ಥವಾಯಿತು. ನನ್ನ ಕೃಷ್ಣನೆಲ್ಲಿ? ಆ ನೀಲಿಯ

ಕಣ್ಣುಗಳುಳ್ಳ ಕೃಷ್ಣನ ಸಾಕ್ಷಾತ್ಕಾರ ಈ ಜನ್ಮದಲ್ಲೇ ಆಗಲೆಂದು ಹರಸಿ' ಎಂದು ಕಣ್ಣೀರು ಸುರಿಸುತ್ತಿದ್ದ ಆ ದೃಶ್ಯವನ್ನು ನೋಡಿ ರಾಮಕೃಷ್ಣರ ಕಂಠವು ಭಾವದಿಂದ ಗದ್ಗದವಾಯಿತು. ಮಾತನಾಡಬೇಕೆಂದು ಬಾಯ್ತೆರೆದರೆ ಮಾತೇ ಹೊರಡಲಿಲ್ಲ. ಎವೆಯಿಕ್ಕದೆ ಆ ದೃಶ್ಯವನ್ನೇ ನೋಡುತ್ತಿದ್ದರು. ನಾಟಕವು ಮುಗಿದನಂತರ ಅವರನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಲಾಯಿತು. ನಟರೆಲ್ಲರೂ ಅವರ ಪಾದಧೂಳಿಯನ್ನು ತೆಗೆದುಕೊಳ್ಳಲು ಬಂದರು. ಈ ಘಟನೆಯನ್ನು ಕುರಿತು ಬಿನೋದಿನಿಯು, 'ಶ್ರೀರಾಮಕೃಷ್ಣರು ನೃತ್ಯದ ದೃಶ್ಯದಲ್ಲಿ ನಿಂತು "ಹರಿ ಗುರು, ಗುರು ಹರಿ" ಎನ್ನುತ್ತಾ ನನ್ನ ತಲೆಯ ಮೇಲೆ ತಮ್ಮ ಪವಿತ್ರವಾದ ಎರಡು ಕೈಗಳನ್ನು ಇಟ್ಟು, ಈ ಅಪವಿತ್ರ ದೇಹವನ್ನು ಪವಿತ್ರಗೊಳಿಸಿದರು. "ನಿನ್ನಲ್ಲಿ ಆಧ್ಯಾತ್ಮಿಕತೆಯು ಜಾಗೃತವಾಗಲಿ!" ಎಂದು ಹರಸಿದರು. ಕನಸಿನಲ್ಲೂ ನೆನಸಲಾಗದ ಈ ಅನಿರೀಕ್ಷಿತದಿಂದ ಮಾತೇ ಹೊರಡದೆ ಗರಬಡಿದವಳಂತೆ ನಿಂತುಬಿಟ್ಟೆ. ಆನಂದದ ಬಾಷ್ಪಗಳಿಂದ ಅವರ ಪಾದಗಳನ್ನು ತೊಳೆದೆ' ಎಂದು ಬರೆಯುತ್ತಾಳೆ.



ನಂತರ ಶ್ರೀರಾಮಕೃಷ್ಣರು ಆಕೆಯು ಅಭಿನಯಿಸಿದ 'ದಕ್ಷಯಜ್ಞ', 'ಪ್ರಹ್ಲಾದ ಚರಿತೆ' , 'ಧ್ರುವ ಚರಿತೆ', 'ವೃಷಕೇತು' ಮುಂತಾದ ನಾಟಕಗಳನ್ನು ನೋಡಿದರು. ಬಿನೋದಿನಿಯು ತನ್ನ ಮೊದಲನೇ ಭೇಟಿಯಲ್ಲಿಯೇ ಶ್ರೀರಾಮಕೃಷ್ಣರನ್ನು ಭಗವಂತನೆಂದು ಸ್ವೀಕರಿಸಿದಳು. ನಿಧಾನವಾಗಿ ರಾಮಕೃಷ್ಣರ ಪ್ರಭಾವವು ಅವಳ ಜೀವನದ ಮೇಲೆ ಆತ್ಯಂತಿಕವಾದ ಪರಿಣಾಮ ಬೀರತೊಡಗಿತು. ಕೊನೆಯಲ್ಲಿ ಶ್ಯಾಮಪುಕುರದಲ್ಲಿ ಶ್ರೀರಾಮಕೃಷ್ಣರು ಕ್ಯಾನ್ಸರ್‌ನಿಂದ ನರಳುತ್ತಿರುವಾಗ ಅವರ ದರ್ಶನವು ದುರ್ಲಭವೆಂದು ತಿಳಿದು ಐರೋಪ್ಯ ನಾಗರಿಕನಂತೆ ವೇಷಧರಿಸಿ ರಾಮಕೃಷ್ಣರ ದರ್ಶನವನ್ನು ಪಡೆದಳು. ರಾಮಕೃಷ್ಣರು ಅವಳ ಧೈರ್ಯ, ಸಾಹಸಗಳಿಗೆ ಮೆಚ್ಚಿ, ಕೆಲವು ಆಧ್ಯಾತ್ಮಿಕ ಸಲಹೆಗಳನ್ನು ನೀಡಿ ಒಂದು ಗಂಟೆಯ ಕಾಲ ಅವಳೊಡನೆ ಮಾತನಾಡಿದರು. ಆನಂದ ಹಾಗೂ ಪಶ್ಚಾತ್ತಾಪದ ಕಣ್ಣೀರಿನಿಂದ ಅವರ ಪಾದಪದ್ಮಗಳ ಅಭಿಷೇಕ ಮಾಡಿ ಹಿಂದಿರುಗಿದಳು. ಇದೇ ಅವರಿಬ್ಬರ ಕೊನೆ ಭೇಟಿಯಾಯಿತು.

೧೬ನೇ ಆಗಸ್ಟ್ ೧೮೮೬ರಂದು ಶ್ರೀರಾಮಕೃಷ್ಣರು ಇಹಲೋಕದ ಯಾತ್ರೆಯನ್ನು ಮುಗಿಸಿದರು. ೨೩ ವರ್ಷದ ಈ ಯುವತಿಯು ೨೬ನೇ ಡಿಸೆಂಬರ್ ೧೮೮೬ರಂದು ರಂಗಭೂಮಿಗೆ ತಿಲಾಂಜಲಿಯನ್ನು ನೀಡಿದಳು. ಕೀರ್ತಿಯ ಶಿಖರವನ್ನೇರಿದ್ದ ಅವಳ ಈ ಕೃತ್ಯ ನಾಟಕರಂಗದಲ್ಲಿ ಒಂದು ಬಿರುಗಾಳಿಯನ್ನೇ ಎಬ್ಬಿಸಿತು. ಶ್ರೀರಾಮಕೃಷ್ಣರ ದರ್ಶನವು ಅವಳಲ್ಲಿ ತುಂಬಾ ಬದಲಾವಣೆಗಳನ್ನು ತಂದಿದ್ದವು. ನಂತರದ ೫೫ ವರ್ಷಗಳ ಜೀವಿತಾವಧಿಯನ್ನು ಕಠಿಣವಾದ ಆಧ್ಯಾತ್ಮಿಕ ಸಾಧನೆಗೆ ಸಮರ್ಪಿಸಿದಳು. ಶ್ರೀಕೃಷ್ಣನ ಪಾದಾರವಿಂದದಲ್ಲಿ ಶರಣಾಗಿ ಶ್ರದ್ಧಾಭಕ್ತಿಗಳಿಂದ ಆರಾಧಿಸಿ ಜೀವನವನ್ನು ಸಾರ್ಥಕಪಡಿಸಿಕೊಂಡಳು. 'ಬಸನ' 'ಕನಕ ಮತ್ತು ನಂದಿ' ಮುಂತಾದ ಹೆಸರಾಂತ ಪುಸ್ತಕಗಳನ್ನಲ್ಲದೆ ತನ್ನ ಆತ್ಮಕಥೆಯನ್ನೂ ಬರೆದಳು.

ಈ ಪ್ರಪಂಚದ ಕಷ್ಟ, ನಷ್ಟಗಳಿಂದ ನೋವನ್ನುಂಡು ಜರ್ಜರಿತವಾದ ಆಕೆಯ ಜೀವನದಲ್ಲಿ ಶ್ರೀರಾಮಕೃಷ್ಣರ ಆಗಮನವು ತಂಪನ್ನೆರೆದು ಆಧ್ಯಾತ್ಮಿಕ ತಿರುವನ್ನು ನೀಡಿತು. 'ಕರುಣಾಘನ', 'ಅಹೇತುಕ ಕೃಪಾಸಿಂಧು' ಎಂದೆಲ್ಲಾ ಪೂಜಿಸಲ್ಪಡುವ ಶ್ರೀರಾಮಕೃಷ್ಣರ ಕೃಪೆಗೆ ಅಮೋಘವಾದ ದೃಷ್ಟಾಂತ ಈಕೆಯ ಜೀವನ ವೃತ್ತಾಂತ. ಪತಿತಳು, ನೀಚಕುಲದವಳು ಎಂದು ಜನರೆಲ್ಲಾ ಹೀಯಾಳಿಸುವವರನ್ನು ಆ ದಯಾಮಯನಾದ ಭಗವಂತನು ಉದ್ಧರಿಸುವನು. ಜೀವನವಿಡೀ ತಪಸ್ಸನ್ನು ಮಾಡಿಯೂ ಪಡೆಯಲಾಗದ ಮಾನವ ಜನ್ಮದ ಗುರಿಯನ್ನು ರಾಮಕೃಷ್ಣರ ಕೃಪೆಯಿಂದ ಪಡೆದಳು. ಧನ್ಯವಾಯಿತು ಆಕೆಯ ಜೀವನ. ☆

ಕತ್ತಲೆ ಕೋಣೆಯಲ್ಲಿ ಗೀರಿದ ಬೆಂಕಿಕಡ್ಡಿಯೊಂದು ಹಲವು ಶತಮಾನಗಳಿಂದ ಅಲ್ಲಿರುವ ಕತ್ತಲೆಯನ್ನು ಒಮ್ಮೆಯೇ ಓಡಿಸುವುದು—ಸ್ವಲ್ಪ ಸ್ವಲ್ಪವಾಗಿ ಅಲ್ಲ. ಇದರಂತೆಯೇ ಒಮ್ಮೆ ಭಗವಂತ ತನ್ನ ಕೃಪಾಕಟಾಕ್ಷವನ್ನು ಬೀರಿದರೆ ಹಲವು ಜನ್ಮಗಳಿಂದ ಮೇಲೆ ಮೇಲೆ ಆವರಿಸಿದ ಪಾಪವನ್ನು ಕ್ಷಣದಲ್ಲಿ ನಾಶ ಮಾಡುತ್ತದೆ.

ಆಟದ ಮೈದಾನದಲ್ಲಿ ಎಲ್ಲಿಯವರೆಗೆ ತಾಯಿ ಬರುವುದಿಲ್ಲವೋ ಅಲ್ಲಿಯವರೆಗೆ ಮಕ್ಕಳು ಆಟದಲ್ಲಿ ಮಗ್ನರಾಗಿರುತ್ತಾರೆ. ಅಂಜಿಕೆ ಆತಂಕಗಳಾವುವೂ ಅವರನ್ನು ಬಾಧಿಸುವುದಿಲ್ಲ. ಅವರು ತಮ್ಮ ಆಟದಲ್ಲಿ ಮಗ್ನರಾಗಿರುತ್ತಾರೆ. ಆದರೆ ತಾಯಿ ಬಂದ ಕ್ಷಣವೇ ಅವು ತಮ್ಮ ಆಟದ ಸಾಮಾನನ್ನು ಆಚೆಗೆಸೆದು 'ಅಮ್ಮ ಅಮ್ಮ' ಎಂದು ಅಳುತ್ತ ಓಡುವುವು. ನೀವು ಕೂಡ ಐಶ್ವರ್ಯ ಕೀರ್ತಿ ಮುಂತಾದ ಆಟದ ಸಾಮಾನುಗಳಲ್ಲಿ ಈಗ ಮಗ್ನರಾಗಿರುವಿರಿ. ನಿಮಗೂ ಕೂಡ ಇದು ಬಹಳ ಸಂತೋಷವಾಗಿರುವಂತೆ ಕಾಣುತ್ತದೆ. ಯಾವ ಆತಂಕವೂ ಇಲ್ಲ, ಅಂಜಿಕೆಯೂ ಇಲ್ಲ. ಆದರೆ ನಿಮಗೆ ಒಮ್ಮೆ ಆನಂದಮಯಿಯ ದರ್ಶನವಾಯಿತೆಂದರೆ ಐಶ್ವರ್ಯ, ಕೀರ್ತಿ, ಗೌರವಗಳ ಕುರಿತು ಸ್ವಲ್ಪವೂ ಇಚ್ಛೆ ಇರುವುದಿಲ್ಲ. ನೀವು ಈ ಆಟದ ಸಾಮಾನನ್ನೆಲ್ಲ ಆಚೆಗೆಸೆದು ಆಕೆಯ ಬಳಿಗೆ ಓಡುವಿರಿ.

ಶ್ರೀರಾಮಕೃಷ್ಣ